**ಚಾಸಾಃ 1     ಪ್ರಾಸಾಃ 1**

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ, ದ. ಕ.

## ಪ್ರಕರಣ ಸಂಖ್ಯೆ ಸಿಸಿ. 620/2015

| | | |
|---|---|---|
| ಹೆಸರು | ಃ | ರಾಜೇಂದ್ರ ದಾಸ್ |
| ತಂದೆಯ ಹೆಸರು | ಃ | ಸದಾಶಿವ ದಾಸ್ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಧರ್ಮಸ್ಥಳ ದೇವಳದಲ್ಲಿ ಮ್ಯಾನೇಜರ್ |
| ವಾಸ | ಃ | ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು |

ದಿನಾಂಕ 22.7.2019 ರಂದು ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ. ಸ. ಅ. ರವರಿಂದ ಃ**

ಶ್ರೀ ಕ್ಷೇತ್ರ ಧರ್ಮಸ್ಥಳ ದೇವಳದಲ್ಲಿ ಮ್ಯಾನೇಜರ್ ಆಗಿ 2006 ನೇ ಇಸವಿಯಿಂದ ಇಲ್ಲಿಯ ತನಕ ಕೆಲಸ ಮಾಡುತ್ತಿರುತ್ತೇನೆ, ಸಾಮಾಜಿಕ ಜಾಲ ತಾಣದಲ್ಲಿ "ನಮ್ಮ ಬೆಳ್ತಂಗಡಿ" ಎಂಬ ಶಿರೋ ನಾಮೆಯಲ್ಲಿ ಫೇಸ್‌ಬುಕ್ ಖಾತೆಯಲ್ಲಿ ಶ್ರೀ ಕ್ಷೇತ್ರ, ಧರ್ಮಾಧಿಕಾರಿ ವೀರಂದ್ರಹೆಗ್ಗಡೆ ಹಾಗೂ ಅವರ ಕುಟುಂಬದ ಸದಸ್ಯರ ಬಗ್ಗೆ ಅತ್ಯಂತ ಕೀಳು ಮಟ್ಟದಲ್ಲಿ ಭಕ್ತರನ್ನು ಕೆರಳಿಸುವ ಹಾಗೂ ಮನಸ್ಸಿಗೆ ಗಾಸಿಯಾಗುವ ರೀತಿ ಅವಹೇಳನಕಾರಿಯಾಗಿ ಕೀಳು ಮಟ್ಟದ ಭಾಷೆಯನ್ನು ಉಪಯೋಗಿಸಿ ಪ್ರಜ್ವಲ್ ಕೆ ವಿ, ನವೀನ್, ಹರೀಶ್ ರಾವ್, ಮೋಹನ್ ಉಜಿರೆ, ಚಂದನ್ ಸೇನಾ, ಯೋಗಿಶ್ ಕುಮಾರ್, ಚಂದನ್ ಗೌಡ ಹಾಗೂ ಅದರ ಹಿಂಬಾಲಕರಾಗಿ ಮಹೇಶ್ ಶೆಟ್ಟಿ ತಿಮ್ಮರೋಡಿ ಅವರಿಗೆ ಪ್ರೋತ್ಸಾಹ ಕೊಟ್ಟಿರುತ್ತಾರೆ, ಒಟ್ಟು 11 ಜನರ ಮೇಲೆ ದೂರು ನೀಡಿರುತ್ತೇನೆ. ಸೌಜನ್ಯ ಕೊಲೆ ಪ್ರಕರಣದಲ್ಲಿ ಯಾರ ಕೈವಾಡ ಇರಬಹುದೆಂದು  ಕಮೆಂಟ್ ಮಾಡಿ ಹರ್ಷೇಂದ್ರ ಕುಮಾರ್ ಮಗನ ಕೈವಾಡ ಎಂದು ಮಾನ ಇಲ್ಲದ ಮುಂಡಾಸುಧಾರಿಗಳಿಗೆ ಹೆದರೋಕೆ ಬೆಳ್ತಂಗಡಿ ತಾಲೂಕು ದ. ಕ. ಜಿಲ್ಲೆಯಲ್ಲಿ ಯಾರೂ ಕೂಡ ನಪಂಕಸಕರು ಇಲ್ಲ ಎಂದು ಕಮೆಂಟ್ ಮಾಡಿರುತ್ತಾರೆ. ಅವರುಗಳಿಗೆ ಚಪ್ಪಲಿ ಮಾಲೆ ಹಾಕಬೇಕು ಡಿ. ವಿ. ಹೆಚ್. (ವಿರೇಂದ್ರ ಹೆಗ್ಗಡೆ) ರವರಿಗೆ, ಕೀಳು ಮಟ್ಟದಲ್ಲಿ ರಂಡೆ ಮಗ

ಎಂದು ಉಪಯೋಗ ಮಾಡಿ, ಹಾಗೂ ಚೇತನ್ ಸಾಲಿಯಾನ್ ಎಂಬುವವರು ವೀರಂದ್ರ ಹೆಗ್ಗಡ್ಡೆ ಕುಟುಂಬದವರು ಇರಬಹುದೆಂದು ಎಂದು ಕಮೆಂಟ್ ಮಾಡಿರುತ್ತಾರೆ, ಮೋಹನ್ ಉಜಿರೆಯವರು ಮುಂಡಾಸುಧಾರಿಗಳು ಎಲ್ಲರೂ ಕಳ್ಳರು, ಅವರಿಗೆ ಹೋಗುವ ಕಾಲ ಬಂದಿದೆ ಎಂದು ಕಮೆಂಟ್ ಮಾಡಿರುತ್ತಾರೆ. ಹರೀಶ್ ರಾವ್ ಎನ್ನುವವರು ದೇವರ ಹೆಸರು ಇಟ್ಟುಕೊಂಡು ಒಳ್ಳೆ ಕಾಸು ಮಾಡುತ್ತಾರೆಂದು ಕಮೆಂಟ್ ಮಾಡಿರುತ್ತಾರೆ. ಚಂದನ್ ಸೇನಾ ಕರೆಂಟ್ ಹೋದಾಗ ಕಾಮುಕರ ಆಟ ಶುರು ಮಾಡುತ್ತಾರೆಂದು ಹೇಳಿರುತ್ತಾರೆ, ಇತ್ಯಾದಿಯಾಗಿ ಕೆಟ್ಟ ಶಬ್ಧದಿಂದ ತುಳು ಭಾಷೆಯಲ್ಲಿ ಕಮೆಂಟ್ ಮಾಡಿರುತ್ತಾರೆ.

2. ಈಗಾಗಿ ನಾನು ನ್ಯಾಯಾಲಯಕ್ಕೆ ಖಾಸಗಿ ಪಿರ್ಯಾದನ್ನು ಸಲ್ಲಿಸಿರುತ್ತೇನೆ, ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಹಿಯನ್ನು ನಿಪಿ-1(ಎ) ಎಂದು, 27 ಫೇಸ್ ಬುಕ್‌ನಲ್ಲಿ ಅವಹೇಳನಕಾರಿಯಾಗಿ ಕಾಮೆಂಟ್ ಮಾಡಿದ ಬಗ್ಗೆ ಅದರ ಪ್ರತಿಗಳನ್ನು ನಿಪಿ-2 ರಿಂದ 28 ಎಂದು ಗುರುತಿಸಲಾಯಿತು. ಶ್ರೀ ಕ್ಷೇತ್ರದ ತೇಜೋವಧೆ ಮಾಡುವ ಹಾಗೂ ಭಕ್ತರನ್ನು ಕೆರಳಿಸಬೇಕೆಂಬ ಉದ್ದೇಶದಿಂದ ಈ ರೀತಿ ಮಾಡಿರುತ್ತಾರೆ, ನಾನು ಕ್ಷೇತ್ರದ ಭಕ್ತ ಹಾಗೂ ಧರ್ಮಸ್ಥಳದ ಸ್ಥಳಿಯ ನಿವಾಸಿಯಾಗಿದ್ದು ನನ್ನ ಮನಸ್ಸಿಗೆ ತುಂಬಾ ನೇವಾಗಿರುತ್ತದೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ, 3 ಮತ್ತು 5 ನೇ ಆರೋಪಿಗಳು ಹಾಜರಿದ್ದು, ಉಳಿದ ಆರೋಪಿಗಳ ಗೈರು ವಿನಾಯತಿಗಾಗಿ ಅರ್ಜಿ ಸಲ್ಲಿಸಿದ್ದು ಗುರುತಿಸುವವಿಕೆ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ** ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ ಒ ಹೇ ಕೆ ಸ ಇ ಎ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
**ಮತ್ತು ಜೆಎಂಎಫ್‌ಸಿ, ಬೆಳ್ತಂಗಡಿ 22-7-2019**